**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಎಸ್.ಸಿ.ನಂ.168/2022**

**ಪಿಡಬ್ಲ್ಯೂ- 01(ಸಿಡಬ್ಲ್ಯೂ-01)**

ಸಾಕ್ಷಿದಾರರ ಹೆಸರು : ರಾಜಶೇಖರ ಜಂಪ್ಲೆ

ತಂದೆಯ ಹೆಸರು : ಕಾಶಿನಾಥ

ವಯಸ್ಸು : 60 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಜೇವೂರ

**ಸಾಕ್ಷಿಗೆ ಇಂದು ದಿನಾಂಕ :– 22/09/2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :– ಸರಕಾರಿ ಅಭಿಯೋಜಕರವರಿಂದ.**

ಮೃತ ಲಕ್ಷ್ಮೀಬಾಯಿ ನನ್ನ ಮಗಳು. ಆರೋಪಿ ನನ್ನ ಅಳಿಯ. ಚಾಸಾ–8 ನನ್ನ ಹೆಂಡತಿ. ಚಾಸಾ–7, 9 ರಿಂದ 15 ರವರು ನನಗೆ ಗೊತ್ತು. ಆಕೆಯನ್ನು ಈ ಘಟನೆ ನಡೆಯುವ 4 ವರ್ಷಗಳ ಮುಂಚೆ ಆರೋಪಿಯೊಂದಿಗೆ ಮದುವೆ ಮಾಡಿಕೊಟ್ಟಿರುತ್ತೇನೆ. ಆಕೆ ಮದುವೆ ಆದ ನಂತರ ಅಥಾಲಟ್ಟಿ ಗ್ರಾಮದ ಅವರ ಹೊಲದಲ್ಲಿ ಮನೆ ಮಾಡಿಕೊಂಡು ವಾಸಿಸುತ್ತಿದ್ದರು. ಚಾಸಾ–7 ರವರು ಅವರ ಮನೆಯ ಪಕ್ಕದಲ್ಲಿ ವಾಸವಿದ್ದರು. ಚಾಸಾ–7 ಆರೋಪಿ ಅಣ್ಣ. ಆರೋಪಿಯು ಮದುವೆ ಆದ ನಂತರ ನನ್ನ ಮಗಳೊಂದಿಗೆ ತಕರಾರು ಮಾಡುತ್ತಿದ್ದ, ನಾವು ಹೋಗಿ ಆತನಿಗೆ ಬುದ್ದಿವಾದ ಹೇಳುತ್ತಿದ್ದೇವು. ಈಗ ಸುಮಾರು ಮೂರೂವರೆ ವರ್ಷಗಳ ಹಿಂದೆ ಆರೋಪಿಯು ಬೆಳಿಗ್ಗೆ 6.30 ಗಂಟೆಗೆ ನನಗೆ ಕರೆ ಮಾಡಿ, ಲಕ್ಷ್ಮಿಗೆ ಹೃದಯಾಘಾತ ಆಗಿದೆ ನೀವು ಬನ್ನಿ ಎಂದು ತಿಳಿಸಿದ. ನಂತರ ನಾವು ಒಂದು ಗಾಡಿ ಮಾಡಿಕೊಂಡು ಊರಿನವರು ಸೇರಿಕೊಂಡು ಆರೋಪಿಯ ಮನೆಗೆ ಹೋದೆವು. ನಾವು ಅಲ್ಲಿಗೆ ಹೋಗಿ ನೋಡಿದಾಗ, ಆತನ ತೋಟದ ಮನೆಯಲ್ಲಿ ಆಕೆಯನ್ನು ಅಂಗಾತ ಹಾಕಿದ್ದರು. ಆಕೆಯ ಸಾವಿನ ಬಗ್ಗೆ ಸಂಶಯ ಇದೆ ಎಂದು ನಾನು ಪೋಲಿಸರಿಗೆ ಹೇಳಿ,

ದೂರು ನೀಡಿರುತ್ತೇನೆ. ನಾನು ಆ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು. ಸಾಕ್ಷಿಯು ಅದರಲ್ಲಿರುವ ತಮ್ಮ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸುತ್ತಾರೆ. ಶವ ಪಂಚನಾಮೆ ಕಾಲದಲ್ಲಿ ನಾನು ಸ್ಥಳದಲ್ಲಿ ಇದ್ದೆ. ಶವ ಪಂಚನಾಮೆಯನ್ನು ಸರಕಾರಿ ದವಾಖಾನೆಯಲ್ಲಿ ಮಾಡಿರುತ್ತಾರೆ. ಆ ಸಮಯದಲ್ಲಿ ಫೋಟೋ ತೆಗೆದಿರುತ್ತಾರೆ. ಸಾಕ್ಷಿಯು ಫೋಟೋದಲ್ಲಿ ತನ್ನನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು. ಶವ ಪಂಚನಾಮೆ ಸಮಯದಲ್ಲಿ ಆಕೆಯ ಕುತ್ತಿಗೆಯಲ್ಲಿ ಕಂದು ಗಟ್ಟಿದ ಗಾಯ ಕಂಡು ಬಂತು. ಎರಡು ದಿನಗಳ ನಂತರ ಚಾಸಾ-7 ರವರು ಆರೋಪಿ ಆಕೆ ಅಡುಗೆ ಮಾಡದ ಕಾರಣ ಆರೋಪಿಯು ಆಕೆಯನ್ನು ಕೇಳಿದಾಗ ಆಕೆ ನಿನ್ನ ತಾಯಿಯಂತೆ ತಿರುಗಾಡುತ್ತಾ ಹೋಗು, ನಾನು ಅಡುಗೆ ಮಾಡಿ ಹಾಕುವುದಿಲ್ಲ ಎಂದು ಹೇಳಿದ ಕಾರಣ ಆರೋಪಿಯು ಆಕೆಯನ್ನು ಹೀಗೆ ಬಿಟ್ಟರೇ ನಮ್ಮ ಮನೆತನದ ಮರ್ಯಾದೆ ತೆಗೆಯುತ್ತಾಳೆ ಎಂದು ಆಕೆಯನ್ನು ಕುತ್ತಿಗೆ ಒತ್ತಿ ಸಾಯಿಸಿರುತ್ತಾನೆ ಎಂದು ತಿಳಿಸಿದನು. ಆ ಕಾರಣ ನಾನು ಆರೋಪಿಯ ವಿರುದ್ಧ ಇನ್ನೊಂದು ದೂರು ನೀಡಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.3 ಎಂದು ಗುರುತಿಸಲಾಯಿತು. ಸಾಕ್ಷಿಯು ಅದರಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸುತ್ತಾರೆ. ಚಾಸಾ-7 ರವರ ಮನೆ ಆರೋಪಿಯ ಪಕ್ಕದಲ್ಲಿ ಇರುತ್ತದೆ. ಆತ ಗಲಾಟೆ ಆಗುವುದನ್ನು ನೋಡಿರುತ್ತೇನೆ ಎಂದು ನನಗೆ ತಿಳಿಸಿದ.

**ಪಾಟೀ ಸವಾಲು:- ಶ್ರೀ. ಎಮ್.ಜಿ.ಕೆ., ವಕೀಲರಿಂದ ಆರೋಪಿ ಪರಃ**

ಪಾಟೀ ಸವಾಲಿಗೆ ಆರೋಪಿ ಪರ ವಕೀಲರುಯ ಕಾಲಾವಕಾಶ ಕೋರಿದ್ದು, ಯಾವುದೇ ಸಕಾರಣ ಕಂಡು ಬರದ ಕಾರಣ ಮತ್ತು ಸಾಕ್ಷಿಯು ಅನಾರೋಗ್ಯದಿಂದ ಇರುವುದು ಕಂಡು ಬರುವ ಕಾರಣ, ಕೋರಿಕೆಯನ್ನು ತಿರಸ್ಕರಿಸಿ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ:- ಇಲ್ಲಾ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಎಸ್.ಸಿ.ನಂ.168/2022**

**ಪಿಡಬ್ಲ್ಯೂ-02 (ಸಿಡಬ್ಲ್ಯೂ-02)**

ಸಾಕ್ಷಿದಾರರ ಹೆಸರು : ಶರಣಪ್ಪ ಕೊಣ್ಣೂರ

ತಂದೆಯ ಹೆಸರು : ತಮ್ಮಣ್ಣ

ವಯಸ್ಸು : **65** ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಲೋಗಾಂವಿ

**ಸಾಕ್ಷಿಗೆ ಇಂದು ದಿನಾಂಕ :- 22/09/2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ನಾನು ನಮ್ಮ ಅಣ್ಣನ ಮೊಮ್ಮಗಳು ತೀರಿಕೊಂಡ ಕಾರಣ ಅಥಾಲಟ್ಟಿಗೆ ಹೋಗಿದ್ದೆ. ಅಲ್ಲಿ ಪೋಲಿಸರು ಪಂಚನಾಮೆ ಮಾಡಿ ನನ್ನ ಹೆಬ್ಬಟನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ನಿ.ಪಿ.2 ಫೋಟೋದಲ್ಲಿ ತನ್ನನ್ನು ನೋಡಿ ಗುರುತಿಸುತ್ತಾರೆ. ಪ್ರಕರಣದ ಬಗ್ಗೆ ನನಗೆ ಬೇರೆ ಯಾವುದೇ ಮಾಹಿತಿ ಇಲ್ಲ. ಶವದ ಕುತ್ತಿಗೆಯಲ್ಲಿ ಗಾಯಗಳು ಆಗಿತ್ತು. ಸಾಕ್ಷಿಯು ಪಂಚನಾಮೆಯಲ್ಲಿರುವ ನನ್ನ ಹೆಬ್ಬಟ್ಟನ್ನು ನೋಡಿ ಗುರುತಿಸಲು ನನಗೆ ಸಾಧ್ಯವಿಲ್ಲ.

*(ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ-ಸರಕಾರಿ ಅಭಿಯೋಜಕರವರಿಂದ**

ದಿ: 15.02.2022 ರಂದು ಸಂಜೆ 5.00 ರಿಂದ 6.00 ಗಂಟೆವರೆಗೆ ವಿಜಯಪುರ ಜಿಲ್ಲಾ ಆಸ್ಪತ್ರೆಯಲ್ಲಿ ಪೋಲಿಸರು ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಮೃತ ಲಕ್ಷ್ಮೀಬಾಯಿಯ ಶವ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಶವ ಪಂಚನಾಮೆಗೆ ನನ್ನ ಹೆಬ್ಬಟನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ

ನಿ.ಪಿ.3 ರಂತೆ ಪೋಟೋ ತೆಗೆದುಕೊಂಡಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲು:- ಶ್ರೀ. ಎಮ್.ಜಿ.ಕೆ., ವಕೀಲರಿಂದ ಆರೋಪಿ ಪರ:</u>**

ಮೃತಳ ತಂದೆಯ ಹೆಸರು ನನಗೆ ಗೊತ್ತಿಲ್ಲ. ಸಾಕ್ಷಿಯು ಆಕೆ ಸರಸ್ವತಿಯ ಮಗಳು ಎಂದು ನುಡಿಯುತ್ತಾರೆ. ಸರಸ್ವತಿಯ ಗಂಡನ ಮತ್ತು ಅಳಿಯನ ಹೆಸರು ನನಗೆ ಗೊತ್ತಿಲ್ಲ. ನಾನು ಮೃತಪಟ್ಟ ವಿಚಾರ ತಿಳಿದು ಅಲ್ಲಿಗೆ ಹೋದಾಗ ಪೋಲಿಸರು ನನ್ನನ್ನು ನಿಲ್ಲಿಸಿ, ಫೋಟೋ ತೆಗೆದಿರುತ್ತಾರೆ ಎಂದರೆ ಸರಿ. ನನಗೆ ಬೇರೆ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ಸರಿ. ಲಕ್ಷ್ಮೀಬಾಯಿ ಹೇಗೆ ತೀರಿಕೊಂಡಿದ್ದಾಳೆ ಎಂದು ನನಗೆ ಗೊತ್ತಿಲ್ಲ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನಗೆ ಪಂಚನಾಮೆಯನ್ನು ಯಾವ ಕಾರಣಕ್ಕೆ ಮಾಡಿದ್ದಾರೆ ಎಂದು ಗೊತ್ತಿಲ್ಲ ಎಂದರೆ ಸಾಕ್ಷಿಯು ಕುತ್ತಿಗೆಗೆ ಪರಚಿದ ಗಾಯ ಆಗಿತ್ತು ಎಂದು ನುಡಿಯುತ್ತಾರೆ. ಶವ ಪಂಚನಾಮೆಯನ್ನು ನನ್ನ ಸಮಕ್ಷಮ ಮಾಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ನನ್ನ ಸಮಕ್ಷಮ ಮಾಡಿರುತ್ತಾರೆ. ಪೋಲಿಸರು ಹೇಳಿ ನಮ್ಮ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ:- ಇಲ್ಲಾ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಜಯಪುರ.

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಎಸ್.ಸಿ.ನಂ.168/2022**

**ಪಿಡಬ್ಲ್ಯೂ-03 (ಸಿಡಬ್ಲ್ಯೂ-03)**

ಸಾಕ್ಷಿದಾರರ ಹೆಸರು : ರಮೇಶ ಜಕಾತಿ

ತಂದೆಯ ಹೆಸರು : ಸದಾಶಿವ

ವಯಸ್ಸು : 30 ವರ್ಷ

ಉದ್ಯೋಗ : ಚಾಲಕ

ವಾಸಸ್ಥಳ : ಲೋಗಾಂವಿ

**ಸಾಕ್ಷಿಗೆ ಇಂದು ದಿನಾಂಕ :- 22/09/2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ಪೋಲಿಸರು ನನಗೆ ಸುಮಾರು 4 ವರ್ಷಗಳ ಹಿಂದೆ ವಿಜಯಪುರ ಸರಕಾರಿ ಆಸ್ಪತ್ರೆಗೆ ಮೃತ ಲಕ್ಷ್ಮೀಬಾಯಿಯ ಶವ ಪಂಚನಾಮೆ ಕಾಲಕ್ಕೆ ಸಾಕ್ಷಿಯಾಗಿ ಕರೆಸಿದ್ದರು. ಅಲ್ಲಿ ಮೃತ ಲಕ್ಷ್ಮೀಬಾಯಿಯ ಶವ ಇತ್ತು. ಶವ ಪಂಚನಾಮೆಯನ್ನು ಸಾಯಂಕಾಲ ಅಂದಾಜು 6.00 ರಿಂದ 8.00 ಗಂಟೆವರೆಗೆ ಮಾಡಿರುತ್ತಾರೆ. ಆ ಸಮಯದಲ್ಲಿ ಚಾಸಾ-2 ರವರು ನನ್ನ ಜೊತೆ ಇದ್ದರು. ಸಾಕ್ಷಿಯು ಶವ ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿ.ಪಿ.2 ಫೋಟೋದಲ್ಲಿ ತನ್ನನ್ನು ನೋಡಿ ಗುರುತಿಸುತ್ತಾರೆ. ಶವವನ್ನು ಗಮನಿಸಿದಾಗ ಅದರ ಕುತ್ತಿಗೆಯಲ್ಲಿ ಗಾಯದ ಗುರುತು ಇತ್ತು.

**ಪಾಟೀ ಸವಾಲು:- ಶ್ರೀ. ಎಮ್.ಜಿ.ಕೆ., ವಕೀಲರಿಂದ ಆರೋಪಿ ಪರಃ**

ಪೋಲಿಸರು ನನಗೆ ಪಂಚರಾಗಿ ಬರುವಂತೆ ನೋಟಿಸ್ ನೀಡಿರುವುದಿಲ್ಲ. ಲಕ್ಷ್ಮೀಬಾಯಿಯನ್ನು ನಾನು ಜೀವಂತೆ ಇರುವಾಗ ನೋಡಿರುತ್ತೇನೆ. ಶವ

ಪಂಚನಾಮೆಯಲ್ಲಿ ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.2 ರ ಫೋಟೋವನ್ನು ಏಕೆ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಶವ ಪಂಚನಾಮೆ ಮಾಡಿದ ಬಗ್ಗೆ ವಿಚಾರ ನನಗೆ ಗೊತ್ತಿಲ್ಲದಿದ್ದರೂ ಸಹ ಗೊತ್ತಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ನಮ್ಮ ಸಮಕ್ಷಮ ಶವ ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಶವದ ಕುತ್ತಿಗೆಯಲ್ಲಿ ಯಾವುದೇ ಗಾಯದ ಗುರುತು ಇರಲಿಲ್ಲ ಎಂದರೆ ಸರಿಯಲ್ಲ. ನಾನು ದೂರುದಾರರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲಾ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ

**ಎಸ್.ಸಿ.ನಂ.168/2022**

**ಪಿಡಬ್ಲ್ಯೂ-04(ಸಿಡಬ್ಲ್ಯೂ-05)**

ಸಾಕ್ಷಿದಾರರ ಹೆಸರು : ಹನಮಂತ ಕೊಣ್ಣೂರ

ತಂದೆಯ ಹೆಸರು : ಅಮ್ಮಣ್ಣ

ವಯಸ್ಸು : 80 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಲೋಗಾಂವಿ

**ಸಾಕ್ಷಿಗೆ ಇಂದು ದಿನಾಂಕ :- 22/09/2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ಪೋಲಿಸರು ಅಥಾಲಟ್ಟಿಯಲ್ಲಿ ಜಾಲಮಟ್ಟಿಯವರ ಮನೆಯಲ್ಲಿ ಪಂಚನಾಮೆ ಮಾಡಿರುತ್ತಾರೆ. ಆ ಸಮಯದಲ್ಲಿ ನಾನು ಸಾಕ್ಷಿಯಾಗಿ ಹೆಬ್ಬಟ್ಟಿನ ಗುರುತು ಹಾಕಿರುತ್ತೇನೆ. ಸ್ಥಳ ಪಂಚನಾಮೆಯಲ್ಲಿ ಸಾಕ್ಷಿಯು ತನ್ನ ಹೆಬ್ಬಟ್ಟಿನ ಗುರುತನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿ.ಪಿ.5 ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಅಂದಾಜು 3 ವರ್ಷಗಳ ಹಿಂದೆ ಮಾಡಿರುತ್ತಾರೆ. ಆ ಸಮಯದಲ್ಲಿ ಪೋಲಿಸರು ಫೋಟೋ ತೆಗೆದಿರುತ್ತಾರೆ. ಸಾಕ್ಷಿಯು ಪೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.6 ಎಂದು ಗುರುತಿಸಲಾಯಿತು. ಬೇರೆ ವಿಚಾರಗಳು ನನಗೆ ಗೊತ್ತಿಲ್ಲ. ಬೇರೆ ಯಾವುದೇ ಪಂಚನಾಮೆಗಳನ್ನು ನನ್ನ ಸಮಕ್ಷಮ ಮಾಡಿರುವುದಿಲ್ಲ.

*(ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ-ಸರಕಾರಿ ಅಭಿಯೋಜಕರವರಿಂದ**

ಚಾಸಾ-12 ರವರು ತೋರಿಸಿದ ಮೃತ ಲಕ್ಷ್ಮೀಬಾಯಿ ವಾಸ ವಿದ್ದ ತೋಟದ ಮನೆಯಲ್ಲಿ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿ.

ದಿ: 16.08.2022 ರಂದು ಪೋಲಿಸರು ನನ್ನ ಸಮಕ್ಷಮ ಮೃತಳ ಮೈಮೇಲೆ ಇದ್ದ ಬಟ್ಟೆಗಳನ್ನು ಚಾಸಾ-20 ರವರು ಹಾಜರು ಪಡೆಸಿದ ಮೇರೆಗೆ ಅಮಾನತ ಪಡೆಸಿಕೊಂಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನಾನು ಈಗ ತೋರಿಸಿದ ಅಮಾನತ ಪಂಚನಾಮೆಗೆ ಹೆಬ್ಬೆಟ್ಟಿನ ಗುರುತು ಹಾಕಿರುತ್ತೇನ ಎಂದರೆ ಸರಿ. ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.7 ಎಂದು ಗುರುತಿಸಲಾಯಿತು. ಅವುಗಳನ್ನು ನೋಡಿದರೆ ಗುರುತಿಸಲು ನನಗೆ ಸಾಧ್ಯವಿಲ್ಲ ಆ ಸಮಯದಲ್ಲಿ ಎರಡೂ ಪಂಚನಾಮೆಗಳನ್ನು ಮಾಡುವ ಸಮಯದಲ್ಲಿ ಚಾಸಾ-4 ರವರು ನನ್ನ ಜೊತೆ ಇದ್ದರು ಎಂದರೆ ಸರಿ.

**ಪಾಟೀ ಸವಾಲು:- ಶ್ರೀ. ಎಮ್.ಜಿ.ಕೆ., ವಕೀಲರಿಂದ ಆರೋಪಿ ಪರಃ**

ನಾನು ಪೋಲಿಸ ಠಾಣೆಗೆ ಹೋಗಿರುವುದಿಲ್ಲ. ನಾನು ಅಥಾಲಟ್ಟೆಯಲ್ಲಿ ಹೋದ ಮನೆ ಯಾರದ್ದು ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ಅಥಾಲಟ್ಟಿಯಲ್ಲಿ ಜಾಲಮಟ್ಟಿ ಮನೆತನದ ಎಷ್ಟು ಮನೆಗಳಿವೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಆ ಮನೆಯ ಮಾಲೀಕ ಬಾಳಪ್ಪ ಜಾಲಮಟ್ಟಿ ಆಗಿದ್ದ. ನಾವು ಹೋದಾಗ ಮನೆಗೆ ಬೀಗ ಹಾಕಿತ್ತು ಎಂದರೆ ಸಾಕ್ಷಿಯು ನಾವು ಹೋದಾಗ ತೆಗೆದಿದ್ದರು ಎಂದು ನುಡಿಯುತ್ತಾರೆ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಎರಡೂ ಪಂಚನಾಮೆ ಮನೆಯ ಒಳಗೆ ಮತ್ತು ಹೊರಗೆ ಮಾಡಿರುತ್ತಾರೆ. ಬೇರೆ ಯಾವ ಪಂಚನಾಮೆಯನ್ನು ನನ್ನ ಸಮಕ್ಷಮ ಮಾಡಿರುವುದಿಲ್ಲ. ಪೋಲಿಸರು ಪೋಲಿಸ್ ಠಾಣೆಯಲ್ಲಿ ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ.

**ಮರು ವಿಚಾರಣೆ:- ಇಲ್ಲಾ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಜಯಪುರ.